IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ವಚನ ಸಾಹಿತ್ಯ ಮತ್ತು ಜೀವನ ಮೌಲ್ಯಗಳು ವಚನಕಾರ್ತಿಯರ ಜೀವನ ಮೌಲ್ಯಗಳು

(ಆಯ್ದ ವಚನಕಾರ್ತಿಯರನ್ನು ಅನುಲಕ್ಷಿಸಿ)

Shelvi Balakrishnan M

Asst. Prof

Christ Academy Institute for Advanced Studies

Hullahalli, koppa – Begur Road Sakalawara post

Banaglore- 560083

ಸಮಾಜದ ಅಡಿಯಲ್ಲಿ ಬಹಳ ಪ್ರಮುಖವಾಗಿ ಮಾನವರಲ್ಲಿ ಜೀವನ ಮೌಲ್ಯಗಳು ಅಧಃಪತನಕ್ಕಿಳಿದಿವೆ ಎಂಬಂತಹ ಮಾತು ಇತ್ತೀಚಿಗೆ ಹೆಚ್ಚಾಗಿ ಕಂಡು ಬರುತ್ತಿದೆ, ಇದನ್ನು ಹೋಗಲಾಡಿಸಿ ಮಕ್ಕಳಲ್ಲಿ ಉತ್ತಮ ಮಾನವೀಯ ಮೌಲ್ಯಗಳನ್ನು ಬೆಳೆಸಲು ವಚನಗಳು ವಿಫುಲ ಅವಕಾಶ ಒದಗಿಸಿ ಕೊಡುತ್ತವೆ. ಪ್ರತಿಯೊಂದು ವಚನಗಳು ಮಾನವರಲ್ಲಿ ಜೀವನ ಮೌಲ್ಯಗಳನ್ನು ತಮ್ಮ ಒಡಲಲ್ಲಿ ತುಂಬಿಕೊಂಡಿರುತ್ತವೆ. ಅವುಗಳನ್ನು ಗುರುತಿಸಿ ಮಕ್ಕಳಲ್ಲಿ ಬೆಳೆಸಬೇಕಾದುದು ಪ್ರತಿಯೊಬ್ಬ ಶಿಕ್ಷಕರ ಆದ್ಯ ಕರ್ತವ್ಯವಾಗಬೇಕು.

ಶರಣರು ವಚನ ಸೃಷ್ಟಿಗೈದುದು ತಮಗಾಗಿ ಅಲ್ಲ, ಜನಸಾಮಾನ್ಯರಿಗಾಗಿ. ಅದು ಅವರಲ್ಲಿನ ನಿಸ್ವಾರ್ಥ ಮನೋಭಾವನೆಯನ್ನು, ನಿಷ್ಕಾಮ ಪ್ರೇಮವನ್ನು , ನಿಷ್ಕಲ್ಮಷ ಮನಸ್ಸನ್ನು ತೋರಿಸುತ್ತದೆ. ಇದನ್ನು ನಮ್ಮ ಮಕ್ಕಳಿಗೆ ಮನದಟ್ಟು ಮಾಡಿಸಬೇಕಾಗಿದೆ. ವಿಶ್ವಶಾಂತಿಗೆ ಪ್ರಮುಖವಾಗಿ ಶರಣರ ತತ್ವ ಶಾಂತಿ ಸಮಾಧಾನ ನೀಡಬಲ್ಲದು. ದ್ವೇಷ, ವಿರಸ,ದ್ವಂದ್ವ ರಹಿತ ಸಮಾಜ ನಿರ್ಮಾಣಕ್ಕೆ ವಚನ ಸಾಹಿತ್ಯದ ಅಧ್ಯಯನ ಬಹಳ ಮುಖ್ಯ. ಇದನ್ನು ನಮ್ಮ ಪೀಳಿಗೆಗೆ ತಿಳಿಸಿ ಹೇಳಬೇಕಾಗಿದೆ. ವಚನ ಜ್ಞಾನ ವ್ಯಕ್ತಿಯಲ್ಲಿರುವ ಅಜ್ಞಾನವನ್ನು ಸುಟ್ಟುಹಾಕಿ ಅವನನ್ನು ಚೈತನ್ಯ ಸ್ವರೂಪವನ್ನಾಗಿಸುತ್ತದೆ. ಈ ಹಿನ್ನಲೆಯಲ್ಲಿ ವಚನ ಸಾಹಿತ್ಯದ ಮೂಲಕ ಜೀವನ ಮೌಲ್ಯಗಳು ವ್ಯಕ್ತಿಯಲ್ಲಿ ಹಾಗೂ ಸಮಾಜದಲ್ಲಿ ಹೇಗೆ ಅರ್ವಿಭಾವಿಸಿವೆ ಎಂಬುದು ಒಡಮೂಡಿಬಂದಿರುವುದನ್ನು ನಾವು ಕಾಣಬಹುದಾಗಿದೆ.

ಜ್ಞಾನ ಉದಯಿಸಿದ ಕ್ಷಣದಲ್ಲಿ ಅಜ್ಞಾನಕ್ಕೆ ಜಾಗವಿಲ್ಲ. ನಮ್ಮ ಸುತ್ತಲೂ ಆವರಿಸಿದ ಕತ್ತಲು ಒಂದು ಸಣ್ಣ ಬೆಳಕಿನಿಂದ ದೂರ ಸರಿಯುವಂತೆ,ವಿದ್ಯೆ ಮತ್ತು ಜ್ಞಾನಗಳು ವ್ಯಕ್ತಿಯ ಅಜ್ಞಾನ ತೊಲಗಿಸಿ ಸುಜ್ಞಾನ ಮೂಡಿಸುತ್ತವೆ. ವಚನಗಳ ಅಧ್ಯಯನದಿಂದ ಮಕ್ಕಳಲ್ಲಿ ಇಂತಹ ಸುಜ್ಞಾನ ಮೂಡಿ ಸರಳತೆ ,ಸಜ್ಜನಿಕೆಗಳನ್ನು ಮೂಡಿಸುವ ಹಾಗೂ ಭ್ರಾತೃತ್ವ ಗುಣಗಳನ್ನು ಬೆಳಸಬಹುದಾಗಿದೆ.

ಸದ್ಗುಣಗಳು ಮಾನವನಿಗೆ ಆಭರಣ ಇದ್ದಂತೆ,ವ್ಯಕ್ತಿಯು ಮೊದಲು ಗುಣಾಢ್ಯನಾಗಬೇಕು.ಪ್ರತಿ

ಕ್ಷಣ ತನ್ನನ್ನು ತಾನೇ ಸ್ವವಿಮರ್ಶೆಗೆ ಒಳಪಡಿಸಿಕೊಂಡು ತನ್ನಲ್ಲಿ ಸ್ವಯಂ ಕಂಡುಬರುವಂತಹ ಅಂಕು-ಡೊಂಕುಗಳು ಅಥವಾ ಓರೆ-ಕೋರೆಗಳನ್ನು ತಿದ್ದಿಕೊಳ್ಳುವ ಪ್ರಯತ್ನದಲ್ಲಿ ತನ್ನನ್ನು ತೊಡಗಿಸಿ

ಕೊಳ್ಳುವುದನ್ನು ವಚನಗಳು ನಮಗೆ ತಿಳಿಸಿಕೊಡುತ್ತವೆ. ವಚನ ಸಾಹಿತ್ಯವು ವಿಸ್ತಾರವಾದ ನೆಲೆಗಟ್ಟುಳ್ಳದ್ದಾಗಿರುತ್ತದೆ. ವ್ಯಕ್ತಿಗೆ ಅವಶ್ಯಕವಾದ ಸಂಸ್ಕಾರಯುತ ಮೌಲ್ಯಗಳನ್ನು ವಚನ ಸಾಹಿತ್ಯ ನೀಡುತ್ತದೆ. ಇಂದಿನ ವಿಶ್ವದ ವಿಷಮ ಸ್ಥಿತಿಗೆ ವಚನ ಸಾಹಿತ್ಯ ಸಿದ್ಧಗೊಂಡಿರುವ ಔಷಧ ಎಂದರೂ ತಪ್ಪಾಗಲಾರದು. ಆದರೆ ಇದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕಾಗಿದೆ.

ವಚನಕಾರ್ತಿಯರು ಮೌಲ್ಯಗಳಿಗಾಗಿಯೇ ಬದುಕಿದವರು, ಅವರ ಜೀವನ ಮೌಲ್ಯಗಳು ಇಂದಿಗೂ ಎಂದೆಂದಿಗೂ ಅಜರಾಮರವಾಗಿ ಉಳಿದಿರುವುದು ಹಾಗೂ ಆದರ್ಶಮಾಯವಾಗಿರುವುದನ್ನು ನಾವು ಕಾಣಬಹುದಾಗಿದೆ. ಸತ್ಯ, ಅಹಿಂಸೆ, ನಿಸ್ವಾರ್ಥ, ಪ್ರೀತಿ, ತ್ಯಾಗ, ಸ್ನೇಹ, ಪ್ರಾಮಾಣಿಕತೆ ಇಂತಹ ಪ್ರಮುಖವಾದ ಅಂಶಗಳನ್ನು ನಾವು ಅವರ ವಚನಗಳಲ್ಲಿ ನಮಗೆ ಕಾಣಸಿಗುತ್ತದೆ. ಜೀವನ ಮೌಲ್ಯಗಳಿಗೆ ಸಂಬಂಧಿಸಿದಂತೆ ಅವರು ಹೆಚ್ಚಾಗಿ ಕಾಯಕದ ಬಗ್ಗೆ ಹಾಗೂ ದಾಸೋಹದ ಬಗೆಗೆ ಮತ್ತು ಸಾಮಾಜಿಕನ್ಯಾಯಕ್ಕೆ ಸೂಕ್ತವಾದ ಮೌಲ್ಯಗಳ ಬಗ್ಗೆ ವಚನಕಾರ್ತಿಯರು ಬಹಳ ಮಹತ್ವದ ವಿಚಾಧಾರೆಗಳನ್ನು ಕಟ್ಟಿಕೊಟ್ಟಿದ್ದಾರೆ. ಜೀವನ ಎಂಬುದು ಎಷ್ಟು ಮುಖ್ಯವೋ ಹಾಗೆಯೇ ಜೀವನ ಮೌಲ್ಯಗಳೂ ಅಷ್ಟೇ ಮುಖ್ಯವಾಗಿದೆ . ಸಮಾಜದಲ್ಲಿ ಹಿಂಸೆಯೂ ಇಲ್ಲವಾಗಿ ಅಹಿಂಸೆಯೆಂಬುದು ಬಹುಮಹತ್ವದ ಜೀವನ ಮೌಲ್ಯವಾಗಬೇಕಾಗಿದೆ ಎಂದು ಅವರು ನಮಗೆ ತಿಳಿಸಿರುತ್ತಾರೆ.

ಅಕ್ಕಮಹಾದೇವಿಯವರ ವಚನಗಳಲ್ಲಿ ಒಂದಾದ

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ

ಹಲವು ಪ್ರಾಣಿಯ ಕೊಂದು ನಲಿನಲಿದಾಡುವ

ತನ್ನ ಮನೆಯಲೊಂದು ಶಿಶು ಸತ್ತಡೆ

ಅದಕ್ಕೆ ಮರುಗುವಂತೆ ಅವನೇಕೆ ಮರುಗ?

ಈ ವಚನದ ಮುಖೇನ ಹಲವಾರು ಪ್ರಾಣಿಗಳನ್ನು ಕೊಂದು ಸಂತೋಷ, ಸಂಭ್ರಮಗಳನ್ನು ಆಚರಿಸುವ ಮನುಷ್ಯನು ತನ್ನ ಮನೆಯಲ್ಲಿ ತನ್ನ ಮಗುವನ್ನು ಕಳೆದುಕೊಂಡಾಗ ಮರುಗುವುದು ಏಕೆ? ಎಂಬುದಾಗಿ ಪ್ರಶ್ನೆಯನ್ನು ಮಾಡುವುದರ ಮೂಲಕ ಅಹಿಂಸಾ ಮೌಲ್ಯದ ಬಗೆಗೆ ಮಾತನಾಡಿದ್ದಾರೆ. ಇಲ್ಲಿ ಒಂದು ಉದಾಹರಣೆ ಎಂದರೆ ಜಾಲಗಾರನೂ ಜಲದಲ್ಲಿರುವ ಪ್ರಾಣಿಗಳನ್ನು ಕೂಡಲೇ ತನಗೆ ಆಹಾರ ಸಿಕ್ಕಿ ಬಿಟ್ಟಿತು ಎಂದು ನಲಿನಲಿದಾಡುವ ಆ ವ್ಯಕ್ತಿಯಾದ ಜಾಲಗಾರನೂ ತನ್ನ ಮನೆಯಲ್ಲಿ ಯಾವುದಾದರೂ ಒಂದು ಮಗುವನ್ನು ಕಳೆದುಕೊಂಡಾಗ ಮನದಾಳದಲ್ಲಿ ಮರುಗುತ್ತಾನೆ. ತಾನೂ ಇದನ್ನು ತಿಳಿದು ಬದುಕಬೇಕು ಎನ್ನುತ್ತಾರೆ. ಜಾಲಗಾರನು ಜಲದಲ್ಲಿರುವ ಪ್ರಾಣಿಗಳನ್ನು ತನ್ನ ಶಿಶುವಿಗೆ ಹೇಗೆ ಜೀವವಿದೆಯೋ ಹಾಗೆ ಜಲದಲ್ಲಿರುವ ಪ್ರಾಣಿಗಳಿಗೂ ಜೀವವಿರುತ್ತದೆ , ಆ ಜೀವಗಳನ್ನು ಸಾಯಿಸಿ, ಈ ಜೀವಕ್ಕೆ ಜೀವಹಿಂಸೆ ಮಾಡುವವನೇ ನಿಜವಾದ ಮಾದಿಗನೆಂದು ಹೇಳುವ ಮೂಲಕ ಇಂತಹ ಹಿಂಸಾವಾದಿಗಳನ್ನು ತಮ್ಮ ವಚನಗಳಲ್ಲಿ ವಿರೋಧಿಸುತ್ತಾರೆ. ಪ್ರತಿ ಮನುಷ್ಯರು ತನಗೆ ಮಾತ್ರ ಶಕ್ತಿ-ಸಾಮರ್ಥ್ಯ ಇದೆ ಎಂದು ತಿಳಿಯುವ ಮೂಲಕ ಏನೂ ತಿಳಿಯದ ಅಸಹಾಯಕ ಪ್ರಾಣಿಗಳ ಮೇಲೆ ಪ್ರತಿನಿತ್ಯ ಅವುಗಳ ಮೇಲೆ ಹಿಂಸೆ ಯನ್ನು ಮಾಡುವುದನ್ನು ವಿರೋಧಿಸುತ್ತಾರೆ.

ಅಕ್ಕಾಮಹಾದೇವಿಯವರು ಸಮಾಜದಲ್ಲಿ ಇರುವ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಅಹಿಂಸೆಯನ್ನು ಜೀವನದ ಒಂದು ಮೌಲ್ಯವಾಗಿಸಿಕೊಳ್ಳಬೇಕು. ತನ್ನ ಬದುಕಿನಲ್ಲಿ ಸಹನೆ ಹಾಗೂ ತಾಳ್ಮೆಗಳನ್ನು ಕೂಡ ಮಹತ್ವದ ವಿಚಾರವಾಗಿ ಅರಿತುಕೊಳ್ಳಬೇಕು. ಜೀವನದಲ್ಲಿ ಶಾಂತಿ ಮತ್ತು ಸಹನೆ ಎಂಬುದು ಇರದಿದ್ದರೆ ವ್ಯಕ್ತಿಯ ಬದುಕು ನರಕವಾಗಿರುತ್ತದೆ ಎಂದಿದ್ದಾರೆ .

ಸಮಾಜದಲ್ಲಿ ಜೀವನ ಮೌಲ್ಯ ಅಥವಾ ಮಾನವೀಯ ಮೌಲ್ಯಗಳನ್ನು ಈ ಕೆಳಕಂಡಂತೆ ನಾವು ಕಾಣಬಹುದಾಗಿದೆ.

೧. ದಯೆ

೨. ಕರುಣೆ

೩. ಅಹಿಂಸೆ

೪. ಧರ್ಮ

೫. ನೈತಿಕತೆ

೬. ಸತ್ಯ

೭. ವೈಯಕ್ತಿಕ ಮಾನವೀಯ ಮೌಲ್ಯ

೮. ಭಕ್ತಿ

೯. ಹಿತ-ಮಿತ ಮೃದು ಭಾಷೆ

೧೦. ಸಕಾರಾತ್ಮಕ ಮೌಲ್ಯ

೧೧. ಸರಳ ಜೀವನ

೧೨. ಅಂತರಂಗ -ಬಹಿರಂಗ ಶುದ್ಧಿ

೧೩. ಸಾಂಸರಿಕ ಮೌಲ್ಯ

೧೪. ಸ್ತ್ರೀ ಪರವಾದ ಮೌಲ್ಯಗಳು

ಸತ್ಯಕ್ಕನವರು ತಮ್ಮ ವಚನಗಳಲ್ಲಿ ಸಮಾಜದಲ್ಲಿ ಯಾವ ರೀತಿಯಾದ ಬದುಕನ್ನು ಪ್ರತಿಯೊಬ್ಬರು ಕಟ್ಟಿಕೊಳ್ಳಬೇಕು ಎಂಬುದನ್ನು ಈ ರೀತಿ ಸರಳವಾಗಿ ತಿಳಿಸಲು ಪ್ರಯತ್ನಿಸುತ್ತಾರೆ.

ಅರ್ಚನೆ ಪೂಜನೆ ನೇಮವಲ್ಲ

ಮಂತ್ರ ತಂತ್ರ ನೇಮವಲ್ಲ

ಧೂಪ ದೀಪಾರತಿ ನೇಮವಲ್ಲ

ಪರಧನ, ಪರಸ್ತ್ರೀ, ಪರದೈವಂ

ಗಳಿಗೆರಗದಿಪ್ಪುದೆ ನೇಮ

ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯ ನೇಮ.

ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ತನ್ನ ಅಂತರಂಗವನ್ನು ಪರಿಶುದ್ಧಗೊಳಿಸಿಕೊಳ್ಳುವ ಮೂಲಕ ಬದುಕನ್ನು ಸಾಗಿಸಬೇಕು ಎಂದಿದ್ದಾರೆ. ಭಗವಂತನನ್ನು ಮೆಚ್ಚಿಸುವ ಸಲುವಾಗಿ ಪೂಜೆಗಳನ್ನು, ಅರ್ಚನೆಗಳನ್ನು ಮಾಡುವುದು ಮುಖ್ಯವಲ್ಲ, ಪ್ರತಿದಿನ ಮಂತ್ರಗಳನ್ನು ಪಠಿಸುವುದು ಮುಖ್ಯವಲ್ಲ, ತಂತ್ರವಿದ್ಯೆಗಳನ್ನು ಕೈಗೊಳ್ಳುವುದು ಮುಖ್ಯವಲ್ಲ. ಎಡೆಬಿಡದ ಧೂಪಗಳನ್ನು ಹಚ್ಚುವುದು ಅಲ್ಲ, ದೀಪಗಳನ್ನು ಬೆಳಗುವುದೂ ಅಲ್ಲ, ನಿಜವಾಗಿಯೂ ಭಗವಂತನ ಕೃಪೆಯು ಯಾರ ಮೇಲೆ ಇರುತ್ತದೆ ಎಂದರೆ ಯಾವ ವ್ಯಕ್ತಿಯೂ ಬೇರೆಯವರ ಹಣಕ್ಕೆ ಆಸೆಪಡುವುದಿಲ್ಲವೊ, ಪರರ ಹೆಣ್ಣು ಮಕ್ಕಳ ಮೇಲೆ ಕೆಟ್ಟ ದೃಷ್ಟಿಯನ್ನು ಬೀರುವುದಿಲ್ಲವೋ, ಪರರ ದೇವರುಗಳ ಬಳಿ ಹೋಗಿ ಮೊರೆ ಇಡುವುದಿಲ್ಲವೋ, ಅಂತಹ ವ್ಯಕ್ತಿಗಳನ್ನು ಭಗವಂತನು ಮೆಚ್ಚಿಕೊಳ್ಳುತ್ತಾನೆ ಎಂದಿದ್ದಾರೆ. ಸಮಾಜದಲ್ಲಿ ಸಮಾನತೆಯ ಅಂಶಗಳನ್ನು ಅರಿತುಕೊಳ್ಳಬೇಕು ಎಂದಿದ್ದಾರೆ. ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಬಹಳ ಪ್ರಮುಖ ಎಂದಿದ್ದಾರೆ.

ತಮ್ಮ ವಚನಗಳ ಮೂಲಕ ಮೋಸ, ವಂಚನೆ, ಪರಧನದ ಆಸೆ ಸಮಾಜದಲ್ಲಿ ಎಂದಿಗೂ ಯಾರಲ್ಲಿ ಇರಬಾರದು ಎಂದಿದ್ದಾರೆ. ಜೀವನವನ್ನು ಸಾರ್ಥಕತೆಯ ಹಂತಕ್ಕೆ ತೆಗೆದುಕೊಂಡು ಹೋಗಬೇಕಾದರೆ ಮಾನವನು ಎಲ್ಲ ಜೀವಿಗಳಲ್ಲಿ ದೈವದ ಅಂಶವೊಂದು ಅಡಕಗೊಂಡಿರುವುದನ್ನು ಅರಿತು ನಡೆಯಬೇಕಾಗಿದೆ. ಯಾವುದೇ ಕಾರಣವಾಗಲಿ ಇತರರಿಗೆ ತೊಂದರೆಯನ್ನು ಉಂಟುಮಾಡಬಾರದು ಎಂದಿದ್ದಾರೆ. ಪ್ರತಿಯೊಬ್ಬರು ಮನುಜರೂ ಕೂಡ ಪ್ರಾಮಾಣಿಕತೆ, ನಿಸ್ವಾರ್ಥದಂತಹ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂಬ ಆಶಯವನ್ನು ಅಭಿವ್ಯಕ್ತ ಪಡಿಸುತ್ತಾರೆ.ಸಮಾಜದಲ್ಲಿ ಕೆಲವರು ಬಹಳ ಕ್ರೂರಿಗಳ ರೀತಿಯಲ್ಲಿ ವರ್ತಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಉದಾಹರಣೆಗೆ ಹೇಳುವುದಾದರೆ ಇವತ್ತಿಗೂ ಎಲ್ಲರಿಗೂ ತಿಳಿದಿರುವ ಸತ್ಯಾಂಶವೆಂದರೆ ಹುಟ್ಟು ಆಕಸ್ಮಿಕ ಹಾಗೂ ಸಾವು ಖಚಿತ ಎಂಬುದು ಹಾಗಾಗಿ ಈ ವಿಷಯ ತಿಳಿದಿರುವ ಮನುಜನೂ ಇವತ್ತೀನ ದಿನಗಳಲ್ಲೂ ಕೂಡ ಕೊಲೆ, ಮೋಸ, ಅನ್ಯಾಯ, ಅಕ್ರಮ ಹಾಗೂ ಅತ್ಯಾಚಾರಗಳನ್ನು ಕೈಗೊಳ್ಳುತ್ತಿರುವುದು ಬಹಳಷ್ಟು ಶೋಚನೀಯ ಸಂಗತಿಯೇ ಸರಿ. ಸಾವೆಂಬುದು ಖಚಿತ ಎಂಬುದಾಗಿ ತಿಳಿದಿರುವ ಪ್ರತಿಯೊಬ್ಬ ಮನುಜನೂ ಕೂಡ ಬೇಡದ ಎಲ್ಲಾ ಅಂಶಗಳನ್ನು ಈ ಕೂಡಲೇ ತೊರೆಯಬೇಕು ಎಂಬುದೇ ವಚನಕಾರ್ತಿಯರ ಬಹು ಮುಖ್ಯವಿಚಾರವಾಗಿ ಕಂಡುಬರುತ್ತದೆ. ಇರುವಷ್ಟು ದಿನ ಪ್ರತಿಯೊಬ್ಬರು ಕೂಡ ಯಾರಿಗೂ ಯಾವುದೇ ರೀತಿಯಾದ ಕೆಡುಕನ್ನು ಬಯಸದೇ ಪ್ರೀತಿ, ವಿಶ್ವಾಸಗಳನ್ನು ಅಳವಡಿಸಿಕೊಳ್ಳುವುದು ಬಹಳ ಅತ್ಯವಶ್ಯಕ. ಈ ಮೊದಲೇ ಹೇಳಿರುವ ಆಗೆ ದಯೆ, ಕರುಣೆ ಎಂಬುದು ಬಹಳ ಮುಖ್ಯವಾಗಿರುತ್ತದೆ.

ನುಡಿಯಲು ಬಾರದು ಕೆಟ್ಟನುಡಿಗಳ

ನಡೆಯಲುಬಾರದು ಕೆಟ್ಟ ನಡೆಗಳ

ನುಡಿದಡೇನು ನುಡಿಯದಿರ್ದಡೇನು

ಹಿಡಿದವ್ರತ ಬಿಡದಿರಲು, ಅದೆ

ಮಹಾಜ್ಞಾನದಾಚರಣೆ ಎಂಬೆನು ಅಜಗಣ್ಣ ತಂದೆ,

ಮುಕ್ತಾಯಕ್ಕ ಅವರು ಹೇಳಿರುವಂತೆ ಸಮಾಜದಲ್ಲಿ ಪ್ರತಿಯೊಬ್ಬರು ಕೂಡ ಕೆಟ್ಟದಾದ ಮಾತುಗಳನ್ನು ಬಿಡಬೇಕು ಹಾಗೂ ಜೀವನದಲ್ಲಿ ತಪ್ಪಾದ ಹೆಜ್ಜೆಗಳನ್ನು ಇಡಬಾರದು, ಬದಲಿಗೆ ನಮ್ಮ ಬದುಕನ್ನು ಸರಿಯಾದ ಮಾರ್ಗದಲ್ಲಿ ನಡೆಸಿಕೊಂಡು ಹೋಗುವ ಪ್ರಯತ್ನವನ್ನು ಮಾಡಬೇಕು. ಯಾವುದೇ ಒಳ್ಳೆಯ ಕಾರ್ಯಗಳನ್ನು ಮಾಡಲು ಹೊರಟಾಗ

ಬಹಳಷ್ಟು ಎಡರು-ತೊಡರುಗಳು ಕಾಣಸಿಗುತ್ತವೆ. ಅಂತಿಮವಾಗಿ ನಾವು ಯಾವುದೇ ಕಾರಣಕ್ಕೂ ಎಲ್ಲಾ ತೊಂದರೆಗಳನ್ನು ಮೆಟ್ಟಿನಿಲ್ಲುವ

ಮುಖೇನ ಹಿಡಿದ ಕೆಲಸವನ್ನು ಪಟ್ಟುಬಿಡದೆ ಅದನ್ನು ಮಾಡಿಯೇ ತೀರುತ್ತೇನೆ ಎಂದು ನಂಬಿಕೆಯಿಂದ ಮಾಡಿದಾಗ ಯಶಸ್ಸು ಎಂಬುದನ್ನು ನಾವು ಕಾಣಬಹುದು . ಸಮಾಜದಲ್ಲಿ ಸಮಾನತೆ ಎಂಬುದು ಅತ್ಯವಶ್ಯಕ ಎಂಬ ವಿಚಾರವನ್ನು ತಿಳಿಸಿರುತ್ತಾರೆ.

ಆಸೆಯೆಂಬುದು ಅರಸಿಂಗಲ್ಲದೆ,

ಶಿವಭಕ್ತರಿಗುಂಟೆ ಅಯ್ಯಾ?

ರೋಷವೆಂಬುದು ಯಮದೂತರಿಗಲ್ಲದೆ,

ಅಜಾತರಿಗುಂಟೆ ಅಯ್ಯಾ, ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ

ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ

ಆಯ್ದಕ್ಕಿ ಲಕ್ಕಮ್ಮನವರ ಪ್ರಕಾರ ನಾವು ಸೀಮೀತವಾದ ಈ ಬದುಕಿನಲ್ಲಿ ಅತಿಯಾದ ಆಸೆಯನ್ನು ಇಟ್ಟುಕೊಳ್ಳಬಾರದು, ಆವೇಶ, ಕೋಪ, ಉದ್ವೇಗಗಳನ್ನು ತ್ಯಜಿಸಿಬಿಡುವುದು ಅತ್ಯುತ್ತಮವಾದುದಾಗಿದೆ.

ಇದನ್ನು ಬಹಳ ಸರಳವಾಗಿ ಹಾಗೂ ಸರಳವಾದ ಉದಾಹರಣೆಗಳ ಮೂಲಕ ಹೇಳುವ ಪ್ರಯತ್ನವನ್ನು ಕೈಗೊಂಡಿರುತ್ತಾರೆ.

ಒಟ್ಟಾರೆಯಾಗಿ ವಚನಕಾರ್ತಿಯರು ತಮ್ಮ ವಚನಗಳ ಮೂಲಕ ಜೀವನ ಮೌಲ್ಯಗಳ ವಿಚಾರಗಳನ್ನು ತಮ್ಮ ತಮ್ಮ ದೃಷ್ಟಿಕೋನದ ಮೂಲಕ ವಿಭಿನ್ನವಾದ ರೀತಿಯಲ್ಲಿ ಸರಳವಾದ ಉದಾಹರಣೆಗಳ ಮೂಲಕ ಅಭಿವ್ಯಕ್ತಪಡಿಸಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.ಸಮಾಜದಲ್ಲಿ ಜೀವನಮೌಲ್ಯಗಳು ಬಹಳ ಅತ್ಯವಶ್ಯಕವಾದುದಾಗಿದೆ.

ಪರಾಮರ್ಶನ ಗ್ರಂಥಗಳು:

೧. ಅಕ್ಕನ ವಚನಗಳು : ಸಂ. ಡಾ.ಸಾ.ಶಿ. ಮರಳಯ್ಯ : ಪ್ರಕಟಣೆ: ರಾಗಿಣಿ ಶಿಕ್ಷಣ ಪ್ರತಿಷ್ಠಾನ, ಬೆಂಗಳೂರು:

೧೯೯೩

೨. ಅಮುಗೆ ರಾಯಮ್ಮನ ವಚನಗಳು(ಇದು ಶಿವಶರಣೆಯರ ಸಮಗ್ರ ಸಂಪುಟದ ಒಂದು ಭಾಗ) ಸಂ.ಡಾ.ಆರ್.ಸಿ. ಹಿರೇಮಠ , ಪ್ರಕಟಣೆ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೬೮

೩. ಅಕ್ಕಮ್ಮನ ವಚನಗಳು:(ಇದು ಶಿವಶರಣೆಯರ ಸಮಗ್ರ ಸಂಪುಟದ ಒಂದು ಭಾಗ) ಸಂ.ಡಾ.ಆರ್.ಸಿ.

ಹಿರೇಮಠ , ಪ್ರಕಟಣೆ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಆಚರಣೆ ಸಂಬಂಧದ ವಚನಗಳು – ಸಂಪಾದನೆಯ ಸಿದ್ದ ವೀರೇಶ್ವರ ದೇವರು, ಸಂ.ಪಿ.ಎಂ. ಗಿರಿರಾಜು, ಪ್ರಕಾಶಕರು: ಶರಣ ಸಂತಾನ ಪ್ರಕಾಶನ, ೪೪೭, ಸಂತೇಪೇಟೆ, ಮೈಸೂರು-೧೯೮೦.

೫. ಶಿವಶರಣೆಯರ ವಚನ ಸಂಪುಟ:ಡಾ.ವೀರಣ್ಣ ರಾಜೂರ: ಪ್ರಕಾಶಕರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೧೯೯೩.